## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

### ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 7/2020

ಫಿರ್ಯಾದಿ ಸಾ–09

ಚಾಸಾ–10

| | | |
|---|---|---|
| ಸಾಕ್ಷಿಯ ಹೆಸರು | – | ರಮೇಶ ಅಮ್ಮಿನಬಾವಿ |
| ತಂದೆ ಹೆಸರು | – | ಫಕ್ಕೀರಪ್ಪ |
| ವಯಸ್ಸು | – | 38 ವರ್ಷ |
| ಉದ್ಯೋಗ | – | ಕೂಲಿ ಕೆಲಸ |
| ವಾಸಸ್ಥಳ | – | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 03-06-2024 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಗೂಲಿ ಕೆಲಸ ಮಾಡುತ್ತೇನೆ. ಈಗ 4-5 ವರ್ಷದ ಹಿಂದೆ ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ಪೊಲೀಸರು ನನ್ನನ್ನು ತೂಕ ಮಾಡುವ ಸಲುವಾಗಿ ಕರೆಸಿ ನಂತರ ಬಾಗಲಕೋಟೆ ರಸ್ತೆಗೆ ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾರೆ. ಕಾರಿನಲ್ಲಿ 4-5 ಜನರು ಇದ್ದರು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ಆ ದಿನ ನೊಡಲಿಲ್ಲ. ಬಾಗಲಕೋಟೆ ರಸ್ತೆ ಮಧ್ಯದಲ್ಲಿ ಕಾರನ್ನು ನಿಲ್ಲಿಸಿ ಕಡ್ಡಿಯಂತಿರುವ ವಸ್ತುಗಳನ್ನು ತೂಕ ಮಾಡಿದರು. ಆ ವಸ್ತುಗಳನ್ನು ಎಲ್ಲಿಂದ ಯಾರು ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳದಲ್ಲಿ ಫೋಟೊ ತೆಗೆದರು ಮತ್ತು ನನ್ನ ಸಹಿಯನ್ನು ತೆಗೆದುಕೊಂಡರು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-59 (ಡಿ) ಎಂದು ಗುರುತಿಸಲಾಯಿತು. ಫೋಟೊಗಳನ್ನು ಗುರುತಿಸುತ್ತೇನೆ. ನಿಶಾನೆ ಪಿ- 62 ಫೋಟೊದಲ್ಲಿ ನಾನು ಕಂಡುಬರುತ್ತೇನೆ. ಫೋಟೊದಲ್ಲಿ ಕಂಡುಬರುವ ವ್ಯಕ್ತಿಗಳನ್ನು ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದಃ**

2. ದಿಃ 15-9-2020 ರಂದು ಬೆಳಿಗ್ಗೆ 6.50 ಘಂಟೆ ಸಮಯದಲ್ಲಿ ಪೊಲೀಸರು ನನ್ನನ್ನು ಮತ್ತು ಮೊಹಮದ ಇಕಬಾಲ-ಚಾಸಾ-4 ರವರನ್ನು ಠಾಣೆಗೆ ಕರೆಸಿದ್ದರು ಅಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ 1 ನೇ ಆರೋಪಿ ಮಾರುತಿ ಹರಿಣಶಿಕಾರಿ ಠಾಣೆಯಲ್ಲಿದ್ದನು ಅಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಆರೋಪಿ ಮಾರುತಿ ನಮ್ಮ ಮುಂದೆ ತನಗೆ ಗಾಂಜಾ ಸಪ್ಲೆಯ ಮಾಡುವ ವ್ಯಕ್ತಿ ಮತ್ತು ಸ್ಥಳ ತೋರಿಸುತ್ತೇನೆಂದು ನಮ್ಮ ಮುಂದೆ ಹೇಳಿದ್ದು, ನನ್ನನ್ನು , ಚಾಸಾ-4 ಮಹಮ್ಮದ ಮತ್ತು ಚಾಸಾ-5 ರವರನ್ನು ಬಾಗಲಕೋಟೆ ರಸ್ತೆಯಲ್ಲಿರುವ ಗದ್ದನಕೇರಿ ಕ್ರಾಸ ಹತ್ತಿರ ಕರೆದುಕೊಂಡು ಹೋಗಿದ್ದು ಅಷ್ಟರಲ್ಲಿ ಮಹಾರಾಷ್ಟ್ರ ನೊಂದಣಿ ಸಂಖ್ಯೆ ಇರುವ ಬಿಳಿ ಕಾರ ಗದ್ದನಕೇರಿ ಕ್ರಾಸ ಹತ್ತಿರ ಬಂದಿದ್ದು 1 ನೇ ಆರೋಪಿ ಮಾರುತಿ ಇದೆ ಕಾರು ಎಂದು ನಮಗೆ ತಿಳಿಸಿದ್ದು , ಪೊಲೀಸರು ಸದರಿ ಕಾರನ್ನು ನಿಲ್ಲಿಸಿದ್ದು ಕಾರಿನಲ್ಲಿ 3 ನೇ ಆರೋಪಿ ಅಬ್ದುಲರಜಾಕ ಕಸಬಾರ ಕಾರಿನೊಳಗೆ ಇದ್ದನು ಅಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮದಲ್ಲಿ ಕಾರಿನ್ನು ಪರಿಶೀಲಿಸಲಾಗಿ ಕಾರಿನ ಡಿಕ್ಕಿನಲ್ಲಿರುವ ಗಾಂಜಾ ಗಿಡ ಮತ್ತು ಬೀಜಗಳು ಕಂಡುಬಂತು ಅಂದರೆ ಸರಿಯಲ್ಲ. ಸದರಿ ಗಿಡಗಳನ್ನು ಗಾಂಜಾ ಗಿಡ ಮತ್ತು ಬೀಜ ಎಂದು ಪೊಲೀಸರು ಖಚಿತಪಡಿಸಿಕೊಂಡು ನಾನು ತಂದಿದ್ದ ತೂಕದ ಮಶೀನನಿಂದ ಅವುಗಳನ್ನು ತೂಕ ಮಾಡಲಾಗಿ ಅವುಗಳ ತೂಕ 1 ಕೆಜಿ 10 ಗ್ರಾಂ ಇತ್ತು ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಸದರಿ ಗಾಂಜಾವನ್ನು ಅಮಾನತುಪಡಿಸಿಕೊಂಡು 100 ಗ್ರಾಂ ಗಾಂಜಾವನ್ನು ಪ್ರತ್ಯೇಕ ಪ್ಯಾಕನಲ್ಲಿ ಪ್ಯಾಕ ಮಾಡಿದರು ಅಂದರೆ ಸರಿಯಲ್ಲ. 3 ನೇ ಆರೋಪಿಯ ಸ್ವಾದೀನದಿಂದ 1500 ರೂ ಗಳು ಮತ್ತು ಒಂದು

ಬಿಳಿ ಬಣ್ಣದ ಸ್ಯಾಮಸಂಗ ಮೊಬೈಲನ್ನು ಅಮಾನತುಪಡಿಸಿಕೊಂಡು ರ ಅಂದರೆ ಸರಿಯಲ್ಲ. 3 ನೇ ಆರೋಪಿ ಇದ್ದ ಕಾರ ನಂಃ ಎಂ ಎಚ್ –11–ಎ ಎನ್–2345 ವಾಹನವನ್ನು ಪೊಲೀಸರು ಅಮಾನತುಪಡಿಸಿಕೊಂಡರು ಅಂದರೆ ಸರಿಯಲ್ಲ. ಪೊಲೀಸರು 3 ನೇ ಆರೋಪಿತನಿಂದ ಅಮಾನತುಪಡಿಸಿಕೊಂಡ ಎಲ್ಲ ವಸ್ತುಗಳ ಬಗ್ಗೆ ಪಂಚನಾಮೆ ಬರೆದು ಸದರಿ ಪಂಚನಾಮಗೆ ಸ್ಥಳದಲ್ಲಿ ನನ್ನ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ಪೊಲೀಸರು ಪಂಚನಾಮೆ ಕಾಲಕ್ಕೆ ತೆಗೆದ ಫೋಟೊದಲ್ಲಿ 3 ನೇ ಆರೋಪಿ ಅಬ್ದುಲ ರಜಾಕ ಕಂಡುಬರುತ್ತಾನೆ ಅಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ಶಾಮೀಲಾಗಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿತರ ಪರವಾಗಿ ವಕೀಲರಿಂದಃ**

ಪಾಟಿ ಸವಾಲು ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.